# ಯಶಸ್ವಿ ಹೃದಯ ಶಸ್ತ್ರಚಿಕಿತ್ಸೆ

**ಕ್ಲಿಷ್ಟಕರ ಹೃದಯ ಚಿಕಿತ್ಸೆ**

**ಇಂಡಿಯಾನಾ ಎಸ್.ಜೆ.ಎಂ. ಹಾರ್ಟ್‌ಸೆಂಟರ್ ವೈದ್ಯರ ಸಾಧನೆ**

ಚಿತ್ರದುರ್ಗ, ಅ. 07 - ಜಿಲ್ಲೆಯ ಏಕೈಕ ಹೃದಯ ರೋಗ ಚಿಕಿತ್ಸಾ ಕೇಂದ್ರವಾದ ಇಂಡಿಯಾನ ಎಸ್.ಜೆ.ಎಂ. ಹಾರ್ಟ್ ಸೆಂಟರ್À (ಬಸವೇಶ್ವರ ಆಸ್ಪತ್ರೆ)ನಲ್ಲಿ ಕ್ಲಿಷ್ಟಕರವಾದ ಹೃದಯ ಚಿಕಿತ್ಸೆ ಮಾಡಿ ಹೃದಯ ತಜ್ಞ ಡಾ|| ಸುಜಯ್ ಮತ್ತು ತಂಡದವರು ಒಂದು ರೋಗಿಯ ಪ್ರಾಣವನ್ನು ಉಳಿಸಿದ್ದಾರೆ.

ರಂಜಿತ ಎನ್ನುವ (ಹೆಸರು ಬದಲಾಯಿಸಿದೆ) 27 ವರ್ಷದ ಯುವತಿಯು ತೀವ್ರವಾದ ಎದೆನೋವಿನಿಂದ ಬಸವೇಶ್ವರ ಆಸ್ಪತ್ರೆಯ ಇಂಡಿಯಾನ ಎಸ್.ಜೆ.ಎಂ. ಹಾರ್ಟ್ ಸೆಂಟರ್ ವಿಭಾಗಕ್ಕೆ ಬಂದಿದ್ದರು, ತಕ್ಷಣ ರೋಗಿಯನ್ನು ಇ.ಸಿ.ಜಿ 2ಡಿ ಇಕೋ ಕಾರ್ಡಿಯಾಗ್ರಫಿ ಪರೀಕ್ಷೆಗೆ ಒಳಪಡಿಸಿದಾಗ ತೀವ್ರವಾದ ಹೃದಯಘಾತವಾಗಿರುವುದು ತಿಳಿಯಿತು. ತಕ್ಷಣವೇ ಅವರನ್ನು ಕ್ಯಾತ್‌ಲ್ಯಾಬ್‌ಗೆ ಸ್ಥಳಾಂತರಿಸಿ ಅಲ್ಲಿ ಅವರಿಗೆ ಆಂಜಿಯೋಗ್ರಾಫಿ ಮಾಡಿದಾಗ ಬಲರಕ್ತನಾಳ ನಾರ್ಮಲ್ ಆಗಿದ್ದು ಎಡಗಡೆಯ ಮುಖ್ಯ ರಕ್ತನಾಳ ಸಂಪೂರ್ಣವಾಗಿ ಬ್ಲಾಕ್ ಆಗಿರುವುದು ಕಂಡು ಬಂದಿರುತ್ತದೆ (ಲೆಫ್ಟ್ ಮೈನ್ ಕೊರಾನರಿ ಆರ್ಟರಿ). ಸಹಜವಾಗಿ ಮುಖ್ಯ ರಕ್ತನಾಳಗಳು ಸಂಪೂರ್ಣವಾಗಿ ಬ್ಲಾಕ್ ಆದರೆ ರೋಗಿ ಬದುಕುವ ಸಾಧ್ಯತೆ ಕಡಿಮೆ, ನಂತರ ತಕ್ಷಣವೇ ಆಂಜಿಯೋಪ್ಲಾಸ್ಟಿ ಮಾಡಿ (ಸ್ಟಂಟ್ ಅಳವಡಿಸಿ) ರಕ್ತನಾಳ ಬ್ಲಾಕ್ ತೆಗೆದು ರಕ್ತಸಂಚಾರ ಸುಗಮವಾಗುವಂತೆ ಮಾಡಲಾಯಿತು. ಆಗ ರೋಗಿಯು ಚೇತರಿಸಿಕೊಂಡಿದ್ದು 2-3 ದಿನ ತೀವ್ರ ನಿಗಾ ಘಟಕದಲ್ಲಿದ್ದು ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ಕ್ಲಿಷ್ಟಕರ ಚಿಕಿತ್ಸೆ ಮಾಡಿ ರೋಗಿಯ ಪ್ರಾಣ ಉಳಿಸಿದ ಡಾ|| ಸುಜಯ್ ಹಾಗೂ ತಂಡದವರಿಗೆ ರೋಗಿಯ ಸಂಬಂಧಿಕರು ಆಸ್ಪತ್ರೆಯ ಆಡಳಿತ ಮಂಡಳಿಗೆ ಅಭಿನಂದಿಸಿದರು. ಈ ಹಿಂದೆ ಜಿಲ್ಲೆಯ ಜನರು ಹೃದಯರೋಗಕ್ಕೆ ಬೆಂಗಳೂರು ಅಥವಾ ಇತರೆ ಜಿಲ್ಲೆಗಳನ್ನು ಆಶ್ರಯಿಸುತ್ತಿದ್ದರು. ಆದರೆ ಈಗ ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆಯಲ್ಲಿ ಇಂಡಿಯಾನ ಎಸ್.ಜೆ.ಎಂ. ಹಾರ್ಟ್ ಸೆಂಟರ್ ಪ್ರಾರಂಭವಾಗಿರುವುದು ಜನರಿಗೆ ಅನುಕೂಲವಾಗಿದೆ ಎಂದು ರೋಗಿಯ ಸಂಬಂಧಿಕರು ಶ್ಲಾಘಿಸಿದ್ದಾರೆ.

